## ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ

## ಓ ಎಸ್ 86/2021

**ಡಿಡಬ್ಲೂಃ 4**

| | |
|---|---|
| ಸಾಕ್ಷಿಯ ಹೆಸರು | ಸಂದೇಶ ಪಿ ಎಸ್ |
| ತಂದೆ ಹೆಸರು | ಲೇಟ್ ಶ್ರೀನಿವಾಸಗೌಡ ಪಿ ಆರ್ |
| ವಯಸ್ಸು | 42 ವರ್ಷ |
| ಉದ್ಯೋಗ | ಪ್ರಥಮ ದರ್ಜೆ ಸಹಾಯಕರು, ಶಾಲಾ ಶಿಕ್ಷಣ ಇಲಾಖೆ, ಟಿ ನರಸೀಪುರ ತಾಲ್ಲೂಕು |
| ವಾಸ | ಟಿ ನರಸೀಪುರ |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 12.02.2026**

**ಮುಖ್ಯ ವಿಚಾರಣೆಃ ಸ್ವತಃ ನ್ಯಾಯಾಲಯದಿಂದಃ**

1. ನಾನು ದಿಃ 01.10.2014 ರಿಂದ ಇಲ್ಲಿಯವರೆಗೂ ಪ್ರಥಮ ದರ್ಜೆ ಸಹಾಯಕರು, ಶಾಲಾ ಶಿಕ್ಷಣ ಇಲಾಖೆ, ಟಿ ನರಸೀಪುರ ತಾಲ್ಲೂಕು ನಲ್ಲಿ ಕರ್ತವ್ಯ ಮಾಡಿಕೊಂಡು ಬರುತ್ತಿದ್ದೇನೆ. ಈ ಘನ ನ್ಯಾಯಾಲಯದ ಆದೇಶದಂತೆ ಈ ಕೆಳಕಂಡ ದಾಖಲೆಗಳನ್ನು ಈ ನ್ಯಾಯಾಲಯದ ಮುಂದೆ ಹಾಜರು ಪಡಿಸಲು ಬಿಇ ಬಿ ಟಿ ನರಸೀಪುರ ತಾಲ್ಲೂಕುರವರು ನನ್ನನ್ನು ನೇಮಕ ಮಾಡಿ ಕಳುಹಿಸಿಕೊಟ್ಟಿದ್ದು, ನ್ಯಾಯಾಲಯದ ಕೋರಿರುವ ದಾಖಲಾತಿಗಳನ್ನು ಈಗ ಹಾಜರು ಪಡಿಸುತ್ತಿದ್ದೇನೆ.

*ನಿಡಿ.1 ದಿಃ 11.02.2023 ರ ಬಿ ಇ ಓ ಟಿ ನರಸೀಪುಪರ ತಾಲ್ಲೂಕು ಕಚೇರಿ ಆದೇಶ*

*ನಿಡಿ.2 ಶ್ರೀ ಮಾಯಿಗಶೆಟ್ಟಿ ರವರಿಗೆ ಸಂಬಂಧಿಸಿದ ದೃಢೀಕೃತ ಮರಣ ಪ್ರಮಾಣಪತ್ರ*

*ನಿಡಿ.3 ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರದ ದೃಢೀಕೃತ ಪ್ರತಿ*

*ನಿಡಿ.4 ಮರಣ ಉಪದಾನ ಮಂಜೂರಾತಿ ದೃಢೀಕೃತ ಪ್ರತಿ*

*ನಿಡಿ.5 ಕುಟುಂಬ ಕಲ್ಯಾಣ ನಿಧಿ ಮಂಜುಾರಾತಿ ಪತ್ರದ ದೃಢೀಕೃತ ಪ್ರತಿ*

*ನಿಡಿ.6 ಸಮೂಹ ವಿಮೆ ಮೊತ್ತದ ಮಂಜೂರಾತಿ ದೃಢೀಕೃತ ಪ್ರತಿ*

*ನಿಡಿ.7 ಸಾಮಾನ್ಯ ಭವಿಷ್ಯ ನಿಧಿ ಅಂತಿಮ ಸಂದಾಯದ ಮಂಜೂರಾತಿ ಪ್ರತಿ*

*ನಿಡಿ.8 ಮರಣ ಪೂರ್ವ ಗಳಿಕೆ ರಜೆ ನಗಧಿಕರಣ ಮಂಜುರಾತಿಯ ದೃಢೀಕೃತ ಪ್ರತಿ*

*ನಿಡಿ.9 ಅನುಕಂಪ ಹುದ್ದೆ ನೇಮಕಾತಿ ಆದೇಶದ ಪ್ರತಿ, ಎಂದು ಗುರುತಿಸಲಾಯಿತು.*

*ಒಟ್ಟು 16 ಪುಟಗಳ ದ್ವಿ ಪ್ರತಿ ದಾಖಲಾತಿಗಳನ್ನು ಈಗ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ.*

***2 ನೇ ಎದುರುದಾರರ ಪರ ಕೆ ಎಂ ಆರ್ ವಕೀಲರು ಹಾಜರಿದ್ದು ಪಾಟೀ ಸವಾಲು ಏನು ಇಲ್ಲ ಎಂದು ಹೇಳಿರುವುದರಿಂದ ಇಲ್ಲ ಎಂದು ತೆಗೆದುಕೊಳ್ಳಲಾಯಿತು.***

*ವಾದಿ ಮತ್ತು 3 ರಿಂದ 5 ನೇ ಪ್ರತಿವಾದಿಗಳನ್ನು ಹಾಗೂ ಅವರ ಪರ ವಕೀಲರನ್ನು ಕರೆಸಲಾಯಿತು. ಗೈರು ಹಾಜರು, ವಾದಿ ಮತ್ತು ಪ್ರತಿವಾದಿ 3 ರಿಂ 5 ರವರು ಈ ಸಾಕ್ಷೀದಾರರನ್ನು ಪಾಟೀ ಸವಾಲು ಮಾಡಲಿಲ್ಲ ಎಂದು ತೆಗೆದುಕೊಳ್ಳಲಾಯಿತು.*

*ಮರು ವಿಚಾರಣೆ ಇಲ್ಲ.*

*(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).*

*ಸಾ.ಓ.ಹೇ.ಕೆ.ಸ.ಇ.*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*
*ಮತ್ತು ಜೆ.ಎಂ.ಎಫ್.ಸಿ.ಪಾಂಡವಪುರ.*